# ಶಾರೂಕ್ ಸಂದಿಗ್ಧ?

‘ಜೀರೊ’ ಚಿತ್ರ ಬಿಡುಗಡೆಯಾದ ಬಳಿಕದ ಶಾರೂಕ್ ಸಂದಿಗ್ಧ ಇನ್ನೂ ಮುಂದುವರಿದಂತಿದೆ. ‘ಜೀರೊ’ ಚಿತ್ರದಲ್ಲಿ ಪ್ರೇಕ್ಷಕರನ್ನು ಆಕರ್ಷಿಸುವ ಎಲ್ಲವೂ ಇದ್ದರೂ, ಶಾರೂಕ್ ಕುಳ್ಳಾಕೃತಿಯನ್ನು ಅಭಿಮಾನಿಗಳು ಮೆಚ್ಚಿಕೊಳ್ಳಲಿಲ್ಲ. ಪರಿಣಾಮವಾಗಿ ಚಿತ್ರದ ಸಾಧಾರಣ ಗಳಿಕೆ ಬಾಲಿವುಡ್‌ನಲ್ಲಿ ದೊಡ್ಡ ಸುದ್ದಿಯಾಯಿತು. ಈ ಚಿತ್ರದ ಸೋಲಿನ ಬಳಿಕ ಅನುಷ್ಕಾ ಕೂಡಾ ಚಿತ್ರರಂಗದಲ್ಲಿ ಮುಂದುವರಿಯುವ ಬಗ್ಗೆ ಜಿಜ್ಞಾಸೆಯ ಹೇಳಿಕೆ ಕೊಟ್ಟಳು. ಜೀರೊ ಬಳಿಕ ಶಾರೂಕ್ ‘ಸಾರೆ ಜಹಾಂಸೆ ಅಚ್ಛಾ’ ಸಿನಿಮಾದಲ್ಲಿ ನಟಿಸುವ ಸುದ್ದಿಯಿತ್ತು. ಆದರೆ ಆ ಪಾತ್ರವನ್ನೂ ಶಾರೂಕ್ ಕೈಬಿಟ್ಟಿದ್ದಾನೆ. 2019 ಮತ್ತು 20ರಲ್ಲಿ ಶಾರೂಕ್ ನಟಿಸಲಿರುವ ಚಿತ್ರಗಳು ಎಂದು ದೊಡ್ಡ ಪಟ್ಟಿಯೇ ಪ್ರಕಟವಾಗಿದೆ. ಯಶ್‌ರಾಜ್ ಫಿಲಂಸ್‌ನ ಹೊಸ ಚಿತ್ರ, 2017ರ ತಮಿಳಿನ ಸೂಪರ್‌ಹಿಟ್ ‘ವಿಕ್ರಂ ವೇದ’ದ ರೀಮೇಕ್, ಕಮಲಹಾಸನ್‌ನ ‘ಹೇರಾಮ್’ ರೀಮೇಕ್, ರಾಹುಲ್ ಧೊಲಾಕಿಯಾ ಹೊಸ ಚಿತ್ರ, ‘ಧೂಮ್ 4’, ‘ಡಾನ್ 3’ ನಿರ್ದೇಶಕ ಬನ್ಸಾಲಿಯ ಹೊಸ ಚಿತ್ರ– ಹೀಗೆ ಪಟ್ಟಿ ದೊಡ್ಡದಿದೆ. ಆದರೆ ಸದ್ಯಕ್ಕಂತೂ ಶಾರೂಕ್ ಯಾವ ಸಿನಿಮಾದಲ್ಲೂ ನಟಿಸುತ್ತಿಲ್ಲ.

ಶಾರೂಕ್ ಅಭಿಮಾನಿಗಳು ಹೀಗೆ ಚಿಂತೆಯಿಂದ ಕುಳಿತಿರುವಾಗಲೇ ಶಾರೂಕ್ ಟಿವಿ ಶೋ ‘ಟೆಡ್ ಟಾಕ್ ಇಂಡಿಯಾ’ದ ಶೂಟಿಂಗ್‌ನಲ್ಲಿ ಭಾಗವಹಿಸಿದ್ದಾನೆ ಎನ್ನುವ ಸುದ್ದಿ ಬಂದಿದೆ. 12 ದಿನಗಳ ಸತತ ಚಿತ್ರೀಕರಣ ಫಿಲ್ಮಿಸ್ತಾನ್ ಸ್ಟುಡಿಯೊದಲ್ಲಿ ನಡೆದಿದೆ. ■





# ಆಲಿಯಾ ಥ್ರಿಲ್!

ಆಲಿಯಾ ಭಟ್ ಪ್ರತಿಭಾವಂತೆ ಮಾತ್ರವಲ್ಲ, ಅದೃಷ್ಟವಂತ ನಟಿಯೂ ಹೌದು. 9ರ ವಯಸ್ಸಿನಲ್ಲಿ ಆಕೆ ಒಮ್ಮೆ ನಿರ್ದೇಶಕ, ನಿರ್ಮಾಪಕ ಸಂಜಯ ಲೀಲಾ ಬನ್ಸಾಲಿಯ ಕಚೇರಿಗೆ ನಟನೆಯ ಅವಕಾಶ ಅರಸಿ ಹೋಗಿದ್ದಳಂತೆ. ಅದು ಹಳೆಯ ಕಥೆ. ಆ ಬಳಿಕ ಆಕೆ ವೃತ್ತಿಜೀವನದಲ್ಲಿ ಹಲವು ಯಶಸ್ಸುಗಳನ್ನು ಕಂಡು ಸದ್ಯಕ್ಕೆ ಬಾಲಿವುಡ್‌ನ ಮುಂಚೂಣಿಯ ನಟಿಯರಲ್ಲಿ ಒಬ್ಬಳಾಗಿದ್ದಾಳೆ. ಆದರೆ ಬನ್ಸಾಲಿಯ ಸಿನಿಮಾದಲ್ಲಿ ನಟಿಸುವ ಅವಕಾಶ ಮಾತ್ರ ಸಿಕ್ಕಿರಲಿಲ್ಲ. ಈಗ ಆಕೆಯ ಆ ಕನಸೂ ನನಸಾಗುತ್ತಿದೆ. ಬನ್ಸಾಲಿ ನಿರ್ದೇಶನದ ‘ಇನ್‌ಶಾ ಅಲ್ಲಾಹ್’ ಚಿತ್ರಕ್ಕೆ ಹೀರೊಯಿನ್ ಆಗಿ ಆಲಿಯಾ ಆಯ್ಕೆಯಾಗಿದ್ದು ನಿರ್ದೇಶಕರು ಅಮೆರಿಕ ಮತ್ತು ವಾರಾಣಸಿಯಲ್ಲಿ ಲೊಕೇಶನ್ ಕೂಡಾ ನೋಡಿ ಬಂದಿದ್ದಾರಂತೆ.

ಈ ಚಿತ್ರದಲ್ಲಿ ಆಕೆಗೆ ನಾಯಕ ಸಲ್ಮಾನ್ ಖಾನ್! ಇಳಿವಯಸ್ಸಿನ ಸಲ್ಮಾನ್, ಇನ್ನೂ ತಾರುಣ್ಯದ ಅಂಚಿನಲ್ಲಿರುವ ಆಲಿಯಾಗೆ ನಾಯಕ ಆಗಿ ಹೊಂದಿಕೆ ಆಗುವುದಾದರೂ ಹೇಗೆ? ಅದಕ್ಕೂ ನಿರ್ದೇಶಕರ ಬಳಿ ಸೂಕ್ತ ಉತ್ತರವಿದೆ. ಈ ಚಿತ್ರದಲ್ಲಿ ಸಲ್ಮಾನ್ 45ರ ಹರೆಯದ ಉದ್ಯಮಿ ಹಾಗೂ ಆಲಿಯಾ 20 ಅಂಚಿನಲ್ಲಿರುವ ನಟಿಯಾಗಬಯಸುವ ತರುಣಿ. ಇಬ್ಬರ ಒಂದು ರೊಮ್ಯಾಂಟಿಕ್ ಪಯಣವೇ ಚಿತ್ರದ ಕಥೆ. ‘ಇದೊಂದು ಅದ್ಭುತ ಅವಕಾಶ. ಈ ಇಬ್ಬರ ಜೊತೆಗೆ ಕೆಲಸ ಮಾಡುತ್ತೇನೆ ಎಂದು ಯಾವತ್ತೂ ಅಂದುಕೊಂಡಿರಲಿಲ್ಲ. ನಿಜಕ್ಕೂ ನನಗೆ ಥ್ರಿಲ್ ಆಗುತ್ತಿದೆ’ ಎಂದಿದ್ದಾಳೆ ಆಲಿಯಾ.

‘ಇನ್‌ಶಾ ಅಲ್ಲಾಹ್’ ಚಿತ್ರ ಬಹುತೇಕ ಈ ನವೆಂಬರ್‌ಗೆ ಶೂಟಿಂಗ್ ಆರಂಭಿಸಬಹುದು. ಸಲ್ಲೂ ಮಿಯಾ ‘ದಬಾಂಗ್ 3’ ಚಿತ್ರೀಕರಣ ಮುಗಿಸುವ ಗಡಿಬಿಡಿಯಲ್ಲಿದ್ದಾನೆ. ಅದು ಕ್ರಿಸ್‌ಮಸ್‌ಗೆ ಬಿಡುಗಡೆಯಾಗುತ್ತದಂತೆ. ಆಲಿಯಾ ನಟಿಸುತ್ತಿರುವ ರಾಜಮೌಳಿ ನಿರ್ದೇಶನದ ‘ಆರ್‌ಆರ್‌ಆರ್’ ಶೂಟಿಂಗ್ ನಡೆಯುತ್ತಿದೆ. ಅದರ ಜೊತೆಗೆ ಅಪ್ಪ ಮಹೇಶ್ ಭಟ್ ನಿರ್ದೇಶನದ ‘ಸಡಕ್–2’ ಚಿತ್ರದ ಶೂಟಿಂಗನ್ನೂ ಆಕೆ ಮುಗಿಸಬೇಕಿದೆ. ಅದಾದ ಬಳಿಕ ‘ಇನ್‌ಶಾ ಅಲ್ಲಾಹ್’ ಶೂಟಿಂಗ್‌ಗೆ ಆಕೆ ಲಭ್ಯ.

ಸಲ್ಮಾನ್ ಖಾನ್ ಮತ್ತು ಬನ್ಸಾಲಿ ಸುಮಾರು 20 ವರ್ಷದ ಬಳಿಕ ಪೂರ್ಣ ಪ್ರಮಾಣದಲ್ಲಿ ಒಟ್ಟಾಗುತ್ತಿದ್ದಾರೆ. 12 ವರ್ಷಗಳ ಹಿಂದೆ ಬನ್ಸಾಲಿಯ ‘ಸಾವರಿಯಾ’ದಲ್ಲಿ ಅಲ್ಲೂ ಸಣ್ಣ ಪಾತ್ರವೊಂದರಲ್ಲಿ ನಟಿಸಿದ್ದರು. ಹಾಗಾಗಿ ಈ ಜೋಡಿಯ ಮಿಲನದ ಬಗ್ಗೆ ಬಾಲಿವುಡ್ ಭಾರಿ ನಿರೀಕ್ಷೆ ಇಟ್ಟುಕೊಂಡಿದೆ.

■ ಬಿಂದು